

## ಒಡೆದು ಆಳುವ ಷಡ್ಯಂತ್ರಗಳು

ಜುಲೈ 25ರ ಸಂಚಿಕೆಯಲ್ಲಿ ಬಂದ ಪಸುನೂರಿ ರವೀಂದರ್ ಅವರು ಬರೆದಿರುವ ತೆಲುಗಿನ ಕಥೆ (ಕನ್ನಡಕ್ಕೆ: ಎಂ.ಜಿ. ಶುಭಮಂಗಳ) 'ಧಮ್ಕಿ', ಕಥೆಯನ್ನು ಹೋಲುವ ಘಟನೆ 2009ರಲ್ಲಿ ಕಾಕತಾಳೀಯವಾಗಿ ನಮ್ಮ ಬದುಕಿನಲ್ಲಿಯೂ ನಡೆದಿದೆ. ಈ ಕಥೆಯಲ್ಲಿ ಬರುವ ಯುವಕರಂತೆ ನಮ್ಮಲ್ಲಿಯೂ ಷಡ್ಯಂತ್ರಕ್ಕೆ ಬಲಿಯಾಗಿ ವಿವೇಚನೆಯಿಲ್ಲದ ಯುವಕರ ಗುಂಪು ಎರಡಾಯ್ತು. ಇಂತಹ ಷಡ್ಯಂತ್ರಗಳು ಇಂದಿಗೂ ನಿಂತಿಲ್ಲ. ಎಲ್ಲಾ ಊರುಗಳಲ್ಲಿ ಯುವಕರ ಒಗ್ಗಟ್ಟು ಒಡೆದು ತಮ್ಮ ಚಕ್ರಾಧಿಪತ್ಯವನ್ನು ಉಳಿಸಿಕೊಳ್ಳುವ ಪಿತೂರಿ ನಡೆಯುತ್ತಲೇ ಇರುತ್ತದೆ.

—ದೆಗ್ಗನಹಳ್ಳಿ ಆನಂದ್, ಕೆ.ಆರ್.ನಗರ

## ಒಡೆಯರ್ ಸ್ಮರಣೆ

'ಧೀಮಂತ ಪುರುಷ' ಜಯಚಾಮರಾಜ ಒಡೆಯರ್ ಅವರ 'ಪ್ರಜಾಪ್ರೇಮ'ವನ್ನು 'ನೂರರ ತೇಜದಲ್ಲಿ ಜಯಚಾಮರಾಜ' ಲೇಖನ (ಜಗನ್ನಾಥ ಪ್ರಕಾಶ್) ಚೆನ್ನಾಗಿ ನಿರೂಪಿಸಿದೆ. ಒಡೆಯರ್ ಅವರ ಜನ್ಮಶತಮಾನೋತ್ಸವ ಸಂದರ್ಭದ ಈ ಲೇಖನ ಸಕಾಲಿಕ.

– ಎಸ್. ಚನ್ನಪ್ಪ, ಮೈಸೂರು, ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ, ಬಿ.ಮನೋಹರ, ಕಾಳಿಹುಂಡಿ ಶಿವಕುಮಾರ್, ಮೈಸೂರು

## ಉತ್ತಮ ಆರೋಗ್ಯ ಲೇಖನ

ಆಗಸ್ಟ್ 01ರ ಸಂಚಿಕೆಯ ಆಹಾರ ಅಂಕಣದ 'ಹೃದಯದ ಆರೋಗ್ಯಕ್ಕೆ ಆಹಾರ' ಲೇಖನ ಮಾಹಿತಿಪೂರ್ಣವಾಗಿದೆ. ಈ ಕುರಿತು ನಾವೆಲ್ಲ ಕಾಳಜಿ ವಹಿಸುವುದು ಅವಶ್ಯಕ. ಎಣ್ಣೆಯ ಆಯ್ಕೆಯ ಕುರಿತಾದ ವಾಕ್ಯವೃಂದ ಸದಾ ಮನನಮಾಡಿ ಅನುಸರಿಸುವಂತಿದೆ.

—ಜಿ. ಟಿ. ಶ್ರೀಧರ ಶರ್ಮಾ, ಸಾಗರ

## ಉತ್ತಮ ಸಂದರ್ಶನ

ಜುಲೈ 18ರ ಸಂಚಿಕೆಯಲ್ಲಿ ನಿರ್ದೇಶಕ ವಿಜಯ್ ಕುರಿತಾದ 'ವಿಜಯ ಪಥ' ಸಂದರ್ಶನ (ಬೆಳಚಿಕ್ಕನಹಳ್ಳಿ ಶ್ರೀನಾಥ್) ಓದಿದೆ. ಮೌಲಿಕ ಹಾಗೂ ಯಶಸ್ವಿ ಚಿತ್ರಗಳನ್ನು ನೀಡಿರುವ ಪ್ರತಿಭಾವಂತ ವಿಜಯ್ ಈಗ ಎಲ್ಲಿದ್ದಾರೆ? ಹೇಗಿದ್ದಾರೆ? ಎಂಬ ಕುತೂಹಲಕ್ಕೆ ಲೇಖನ ಉತ್ತರ ನೀಡಿದೆ. ಅವರ 'ಸನಾದಿ ಅಪ್ಪಣ್ಣ', 'ನಾ ನಿನ್ನ ಮರೆಯಲಾರೆ' 'ಗಂಧದ ಗುಡಿ', 'ಮಯೂರ' ಇವೆಲ್ಲ ನಾಡಿನ ಹೆಮ್ಮೆಯ ಚಿತ್ರರತ್ನಗಳು. ಅವರು ಸೃಷ್ಟಿಸಿದ ಪ್ರತಿ ಚಿತ್ರವೂ ವಿಶಿಷ್ಟ, ವಿಭಿನ್ನ.

—ರಮೇಶ್ ರಾವ್, ಕೈತುಂಬ, ರವೀಂದ್ರನಾಥ.ಶಿ. ಯಡಹಳ್ಳಿ, ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮೊಬೈಲ್ ಟ್ರಬಲ್

'ಮೊಬೈಲ್ ಟ್ರಬಲ್' 'ಟ್ರಬಲ್ ಆಗಬಾರದು; 'ನೋಬಲ್' ಆಗಬೇಕು; 'ಅಂಗೈಗಿಣಿ'ಯಷ್ಟೆ ಆಗದೆ, 'ರತ್ನಮಣಿ' ಆಗಬೇಕು! 'ಶಾಪ' ವರವಾಗಲಿ, (ಅನಿವಾರ್ಯಕ್ಕೆ ಅತ್ತು ಫಲವಿಲ್ಲ).

—ಸಿಪಿಕೆ, ಮೈಸೂರು

ಜುಲೈ 18ರ ಸಂಚಿಕೆಯಲ್ಲಿ ಪ್ರವೀಣ ಕುಲಕರ್ಣಿ ಅವರ 'ಮೊಬೈಲ್ ಟ್ರಬಲ್' ಲೇಖನ ಸೊಗಸಾಗಿದೆ. ವ್ಯಸನಮುಕ್ತಿಗೆ ನಡೆದಿರುವ ಪ್ರಯತ್ನಗಳೇನೋ ಸರಿ. ಆದರೆ ಬರೀ ಅಷ್ಟರಿಂದಲೇ ಈ ಟ್ರಬಲ್ ಪರಿಹಾರವಾವಾಗಲಾರದು. ಈ ಅವಾಂತರಗಳಿಗೆ ಕಾರಣವಾದ ನಮ್ಮ ವಿವೇಚನಾ ಪ್ರಜ್ಞೆಯ ಕೊರತೆಯ ಬಗ್ಗೆಯೂ ಗಮನಹರಿಸಬೇಕಿದೆ. ಸರ್ಕಾರಗಳೂ ಎಚ್ಚೆತ್ತುಕೊಳ್ಳಬೇಕಿದೆ. ಬರೀ ಲಾಭಾಕಾಂಕ್ಷೆಯ ಬಂಡವಾಳಶಾಹಿಯ ಹಿಡಿತದ ಬಗ್ಗೆ ನಾವು ಅರಿಯಬೇಕಿದೆ. ಏಕೆಂದರೆ ಮೊಬೈಲ್ ಟ್ರಬಲ್‌ನಿಂದಾಗಿ ಪೀಳಿಗೆ ಪೀಳಿಗೆಯೇ ನಾಶವಾಗುತ್ತಿದೆ. ವಯಸ್ಸಿನ ಮಿತಿ ಇಲ್ಲದೆ ಹಳ್ಳಿ, ನಗರ ಎನ್ನದೆ ಎಲ್ಲರೂ ಮೊಬೈಲ್‌ನಲ್ಲಿ ಮುಳುಗಿ ಹೋಗಿದ್ದಾರೆ. ಇವೆಲ್ಲಕ್ಕೂ ಒಂದು ಕಡಿವಾಣ ಬೇಕು.

—ಹುರುಕಡ್ಲಿ ಶಿವಕುಮಾರ ಹಗರಿಬೊಮ್ಮನಹಳ್ಳಿ, ರಾಜೀವ್ ಎನ್. ಮಾಗಲ್ ಹಾಸನ, ಪ್ರಮೀಳಾ ಷಣ್ಮುಖ ಮೈಸೂರು

## ದುಬಾರಿ ಕನಸು...

ಜುಲೈ 25ರ ಸಂಚಿಕೆಯಲ್ಲಿ ಸುರೇಖಾ ಹೆಗಡೆ ಬರೆದಿರುವ 'ಹೂ ಮನಸು ದುಬಾರಿ ಕನಸು' ಲೇಖನದಲ್ಲಿ ಎಳೆಮನಸ್ಸಿನ ಮೇಲೆ ಪೋಷಕರ ಕನಸುಗಳನ್ನು ಸಾಕಾರಗೊಳಿಸುವ ಒತ್ತಡದ ಕುರಿತು ಗಮನಾರ್ಹ ಸಂಗತಿಗಳನ್ನು ಹೇಳಿದ್ದಾರೆ. ತಾವು ಅಪೇಕ್ಷಿಸಿದಂತೆ ಮಕ್ಕಳು ಚಿಗುರಬೇಕು ಎಂಬ ಕಾರಣಕ್ಕೆ ಎಳೆ ಮನಸಿನಲ್ಲಿ ಬೇಡದ ಸಂಗತಿಗಳನ್ನು ತುಂಬುವರು. ಇದು ಈ ಯುಗದ ಚಿಣ್ಣರ ಜಗತ್ತು!

—ಶ್ರುತಿ ರಿಗ್ರೆಟ್ ಅಯ್ಯರ್ ಬೆಂಗಳೂರು, ವೇದಾವತಿ ಎಂ., ಕೆ.ಆರ್. ಪೇಟೆ ಎಚ್. ಆನಂದ್‌ಕುಮಾರ್, ಚಿತ್ರದುರ್ಗ



## ಅನ್ಯೋನ್ಯತೆಗೆ ಹುಡುಕಾಟ

ಪ್ರತಿವಾರ ಸುಧಾದಲ್ಲಿ ಪ್ರಕಟವಾಗುವ ವಿನೋದ ಛೆಬ್ಬಿಯವರ 'ಸುಖೀ ದಾಂಪತ್ಯ' ಅಂಕಣದಲ್ಲಿ ಪ್ರಕಟವಾಗುತ್ತಿರುವ 'ಅನ್ಯೋನ್ಯತೆಗೆ ಹುಡುಕಾಟ' ಸರಣಿ ತುಂಬಾ ಚೆನ್ನಾಗಿದೆ. ಎರಡು ಪುಟ ಮೀಸಲಿಡಬಹುದು.

—ಪ್ರಕಾಶ, ಮನಸಿರಿ ಆಪ್ತಸಲಹಾ ಕೇಂದ್ರ ಮಂಗಳೂರು

## ಪ್ರವಾಸಕ್ಕೆ ಪ್ರೇರೇಪಿಸಿದ ಲೇಖನ

ಜುಲೈ 25ರ ಸಂಚಿಕೆಯಲ್ಲಿ ಜಿ.ನಾಗೇಂದ್ರ ಕಾವೂರು ಅವರು ಬರೆದ ಹಾಲೆಂಡಿನ ಮಡುರೋಡಾಮ್ ಚಿಕಣಿ ಮಾದರಿಯ ಪಾರ್ಕ್ ಕುರಿತು ಓದುತ್ತಿದ್ದ ಹಾಗೆ ನನಗೂ ಹಾಲೆಂಡಿನ ಪ್ರವಾಸಕ್ಕೆ ಹೋಗಲು ಆಸೆಯಾಯಿತು.

—ಅನುರಾಧ ತಾಪ್ಸೆ, ದಾವಣಗೆರೆ

## ವಿಭಾ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ

'ವಿಭಾ ಸಾಹಿತ್ಯ ಪ್ರಶಸ್ತಿ2019'ಕ್ಕಾಗಿ ಮೂವತ್ತಕ್ಕೂ ಹೆಚ್ಚು ಸ್ವರಚಿತ ಕವಿತೆಗಳ ಹಸ್ತಪ್ರತಿಗಳನ್ನು ಆಹ್ವಾನಿಸಲಾಗಿದೆ. ಅನುವಾದಿತ ಕವಿತೆಗಳು ಬೇಡ. ಚುಟುಕು, ಹನಿಗವನಗಳು ಬೇಡ. ಈ ಪ್ರಶಸ್ತಿಯು ₹ 10,000/ ನಗದು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಡಿಟಿಪಿ ಅಥವಾ ಕೈಬರಹದ ಹಸ್ತಪ್ರತಿ ಕಳಿಸಿಕೊಡಬೇಕು. ಯಾವುದೇ ಕಾರಣಕ್ಕೂ ಹಸ್ತಪ್ರತಿಯನ್ನು ಹಿಂದಿರುಗಿಸಲಾಗುವುದಿಲ್ಲ. ಹಸ್ತಪ್ರತಿ ಕಳುಹಿಸಲು ಕೊನೆಯ ದಿನಾಂಕ: ಆಗಸ್ಟ್ 20.

ಹಸ್ತಪ್ರತಿಯನ್ನು ಕಳುಹಿಸಬೇಕಾದ ವಿಳಾಸ:
ಪ್ರಕಾಶ ಸುನಂದಾ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ2019, ನಂ. 90, 'ನಾಗಸುಧೆ ಜಗಲಿ', 6/ಬಿ ಅಡ್ಡರಸ್ತೆ, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 580031
ದೂರವಾಣಿ: 9845779387

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in